ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಶುಕ್ರವಾರ, ದಿನಾಂಕ 19ನೇ ಜುಲೈ, 2019

ಬೆಂಗಳೂರು ಮಹಾನಗರ ಪಾಲಿಕೆ ಸಂಗ್ರಹಿಸಿದ ಆಸ್ತಿ ತೆರಿಗೆ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-

402 (218) ಮಾನ್ಯ ಉಪ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2013-14 ರಿಂದ 2016-17ರ ಅವಧಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಂಗ್ರಹಿಸಿದ ಆಸ್ತಿ ತೆರಿಗೆಯ ಮೊತ್ತವೆಷ್ಟು ;

(ಆ) 2013-14ರಿಂದ 2016-17ರ ಅವಧಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಆಸ್ತಿ ತೆರಿಗೆಯ ಮೇಲೆ ಯಾವ ಯಾವ ಸೆಸ್‌ಗಳನ್ನು ಹೆಚ್ಚುವರಿ ತೆರಿಗೆಯ ರೂಪದಲ್ಲಿ ಹಾಕಲಾಗಿತ್ತು ; ಈ ಸೆಸ್ ಹೆಚ್ಚುವರಿ ತೆರಿಗೆಯ ಪ್ರಮಾಣವೆಷ್ಟು ;ಈ ಹೆಚ್ಚುವರಿ ತೆರಿಗೆಯನ್ನು ಯಾವ ಕಾರಣಕ್ಕಾಗಿ ಬಳಸಬೇಕಾಗಿತ್ತು ;

(ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2013-14 ರಿಂದ 2016-17ರ ಅವಧಿಯಲ್ಲಿ ಆಸ್ತಿ ತೆರಿಗೆಯ ನಗರ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸುವ ನಿಟ್ಟಿನಲ್ಲಿ ವಿಧಿಸಿರುವ ಹೆಚ್ಚುವರಿ ತೆರಿಗೆ (ಸೆಸ್) ಪ್ರಮಾಣವೆಷ್ಟು ; ಈ ಮೂಲಕ ಸಂಗ್ರಹಿಸಲಾದ ತೆರಿಗೆಯ ಮೊತ್ತವೆಷ್ಟು ;

(ಈ) ಈ ಹೆಚ್ಚುವರಿ ತೆರಿಗೆಯನ್ನು ಸಂಗ್ರಹಿಸಿಲ್ಲವೆಂದಾದಲ್ಲಿ ಅದಕ್ಕೆ ಕಾರಣಗಳೇನು ; ಯಾವ ಅಧಿಕಾರಿಯನ್ನು ಜವಾಬ್ದಾರರನ್ನಾಗಿಸಲಾಗಿದೆ ; ಈ ತೆರಿಗೆ ನಷ್ಟವನ್ನು ಸಂಬಂಧಿಸಿದ ಅಧಿಕಾರಿಯಿಂದ ವಸೂಲು ಮಾಡಲು ತೆಗೆದುಕೊಂಡ ಕ್ರಮಗಳೇನು ;